aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Political Science (Paper 1, Kannada Medium) Key Answers

EXAM	YEAR	TYPE	SUBJECT
Karnataka Class 10	2027	Answer Key	Political Science

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

Malleshwaram, Bengaluru – 560003

ಮಾದರಿ ಉತ್ತರಗಳು
MODEL ANSWERS

ವಿಷಯ : ರಾಜ್ಯಶಾಸ್ತ್ರ
SUBJECT : POLITICAL SCIENCE
(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ/ಶಾಲಾ ಪುನರಾವರ್ತಿತ ಅಭ್ಯರ್ಥಿ/ಖಾಸಗಿ ಅಭ್ಯರ್ಥಿ/ ಖಾಸಗಿ ಪುನರಾವರ್ತಿತ ಅಭ್ಯರ್ಥಿ)

ಪರೀಕ್ಷಾ ಸಮಯ : 3 ಗಂಟೆ 15 ನಿಮಿಷಗಳು | **ವಿಷಯ ಸಂಕೇತ-97 K**
ಗರಿಷ್ಠ ಅಂಕಗಳು : 80 | **Subject Code : 97 K**

I ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. **10x1=10**

1. ಮೂಲಭೂತ ಹಕ್ಕುಗಳ ಪಟ್ಟಿಯಿಂದ ಆಸ್ತಿಯ ಹಕ್ಕನ್ನು ರದ್ದುಪಡಿಸಿದ ಸಂವಿಧಾನದ ತಿದ್ದುಪಡಿ
   A) 42ನೇ ತಿದ್ದುಪಡಿ
   B) 44ನೇ ತಿದ್ದುಪಡಿ
   C) 46ನೇ ತಿದ್ದುಪಡಿ
   D) 76ನೇ ತಿದ್ದುಪಡಿ

   ಉತ್ತರ : B) 44ನೇ ತಿದ್ದುಪಡಿ

2. ಮುಂದಿನವುಗಳಲ್ಲಿ 'ಸಂವಿಧಾನದ ಒಡವೆ' ಎಂದು ಕರೆಯಲ್ಪಟ್ಟಿರುವುದನ್ನು ಗುರುತಿಸಿ
   A) ಪ್ರಸ್ತಾವನೆ
   B) ಮೂಲಭೂತ ಕರ್ತವ್ಯಗಳು
   C) ಮೂಲಭೂತ ಹಕ್ಕುಗಳು
   D) ಸರ್ವೋಚ್ಚ ನ್ಯಾಯಾಲಯ

   ಉತ್ತರ : A) ಪ್ರಸ್ತಾವನೆ

3. ವಿಧಿ 21A ಇದರ ಬಗ್ಗೆ ವಿವರಣೆ ನೀಡುವುದು.
   A) ಉಚಿತ ಮತ್ತು ಕಡ್ಡಾಯ ಶಿಕ್ಷಣ
   B) ಮೂಲಭೂತ ಹಕ್ಕುಗಳು
   C) ಮೂಲಭೂತ ಕರ್ತವ್ಯಗಳು
   D) ರಾಜ್ಯ ನಿರ್ದೇಶಕ ತತ್ವಗಳು

   ಉತ್ತರ : A) ಉಚಿತ ಮತ್ತು ಕಡ್ಡಾಯ ಶಿಕ್ಷಣ

4. ನಮ್ಮ ಸಂವಿಧಾನದ ರಚನಾತ್ಮಕ ಭಾಗ ಎಂದು ಇದನ್ನು ವಿವರಿಸಲಾಗಿದೆ
   A) ಕೇಂದ್ರ ಶಾಸಕಾಂಗ
   B) ಕೇಂದ್ರ ಲೋಕಸೇವಾ ಆಯೋಗ
   C) ಮೂಲಭೂತ ಕರ್ತವ್ಯಗಳು
   D) ರಾಜ್ಯ ನಿರ್ದೇಶಕ ತತ್ವಗಳು

   ಉತ್ತರ : D) ರಾಜ್ಯ ನಿರ್ದೇಶಕ ತತ್ವಗಳು

5. ರಾಷ್ಟ್ರಪತಿ ಭವನದ ವಾಸ್ತುಶಿಲ್ಪದ ವಿನ್ಯಾಸ ಸಿದ್ದಪಡಿಸಿದವರೆಂದರೆ
   A) ಸರ್. ಎಂ. ವಿಶ್ವೇಶ್ವರಯ್ಯ
   B) ಲಾರ್ಡ್ ಇರ್ವಿನ್
   C) ಎಡ್ವಿನ್ ಲುಟಿಯಾನ್ಸ್
   D) ಲಾರ್ಡ್ ಮೌಂಟ್ ಬ್ಯಾಟನ್

ಉತ್ತರ : C) ಎಡ್ವಿನ್ ಲುಟಿಯಾನ್ಸ್

6. ಶಾಸಕಾಂಗ ಅಧಿವೇಶನದಲ್ಲಿ ಬೆಳಗಿನ 11:00 ಕ್ಕೆ ಪ್ರಾರಂಭವಾಗಿ ಶೂನ್ಯವೇಳೆಯ ಆರಂಭಕ್ಕೆ ಕೊನೆಗೊಳ್ಳುವ ಅವಧಿಯನ್ನು ಹೀಗೆ ಕರೆಯಲಾಗಿದೆ.

A) ಶೂನ್ಯವೇಳೆ
B) ಪ್ರಶ್ನಾವೇಳೆ
C) ಗಮನ ಸೆಳೆಯುವ ಸೂಚನೆ
D) ನಿಲುವಳಿ ಸೂಚನೆ

ಉತ್ತರ : B) ಪ್ರಶ್ನಾವೇಳೆ

7. ಭಾರತದ ಸರ್ವೋಚ್ಚ ನ್ಯಾಯಾಲಯವು ಅಂತರ–ರಾಜ್ಯ ವಿವಾದಗಳನ್ನು ಈ ಅಧಿಕಾರ ವ್ಯಾಪ್ತಿಯಡಿ ಪರಿಶೀಲಿಸುವುದು.

A) ಸಲಹಾತ್ಮಕ ಅಧಿಕಾರ ವ್ಯಾಪ್ತಿ
B) ನ್ಯಾಯಿಕ ವಿಮರ್ಶೆ ಅಧಿಕಾರ
C) ಅಫೀಲು ಅಧಿಕಾರ ವ್ಯಾಪ್ತಿ
D) ಮೂಲ ಆಧಿಕಾರ ವ್ಯಾಪ್ತಿ

ಉತ್ತರ : D) ಮೂಲ ಆಧಿಕಾರ ವ್ಯಾಪ್ತಿ

8. ರಾಜ್ಯ ಅಡ್ವೋಕೇಟ್ ಜನರಲ್ ರವರು ಇವರಿಂದ ನೇಮಿಸಲ್ಪಡುವರು

A) ಮುಖ್ಯ ನ್ಯಾಯಾಧೀಶರು
B) ಗೃಹ ಸಚಿವರು
C) ರಾಜ್ಯಪಾಲರು
D) ಕೊಲಿಜಿಯಂ

ಉತ್ತರ : C) ರಾಜ್ಯಪಾಲರು

9. ರಾಜ್ಯ ವಿಧಾನಸಭೆಯನ್ನು 'ಜನತಾ ಸದನ' ಎಂದು ಕರೆಯಲಾಗುವುದು. ಏಕೆಂದರೆ

A) ಇದು ನಾಮಮಾತ್ರ ಸದಸ್ಯರಿಂದ ಕೂಡಿರುವುದು
B) ಇದು ಹಣಕಾಸಿನ ಅಧಿಕಾರ ಹೊಂದಿರುವುದು
C) ಇದು ಚುನಾಯಿತ ಪ್ರತಿನಿಧಿಗಳಿಂದ ಕೂಡಿರುವುದು
D) ಇದು ಹೆಚ್ಚಿನ ಅಧಿಕಾರ ಹೊಂದಿರುವುದು

ಉತ್ತರ : C) ಇದು ಚುನಾಯಿತ ಪ್ರತಿನಿಧಿಗಳಿಂದ ಕೂಡಿರುವುದು

10. ಗ್ರಾಹಕರ ಹಿತಾಸಕ್ತಿಗಳನ್ನು ಸಂರಕ್ಷಣೆ ಮಾಡುವ ನ್ಯಾಯಾಲಯವೆಂದರೆ

A) ನಾಗರೀಕ ನ್ಯಾಯಾಲಯಗಳು
B) ಗ್ರಾಹಕ ನ್ಯಾಯಾಲಯಗಳು
C) ಅಪರಾಧಿಕ ನ್ಯಾಯಾಲಯಗಳು
D) ಲೋಕ ಅದಾಲತ್

ಉತ್ತರ : B) ಗ್ರಾಹಕ ನ್ಯಾಯಾಲಯಗಳು

II ಪಟ್ಟಿ 'A' ಅನ್ನು ಪಟ್ಟಿ 'B' ಯೊಂದಿಗೆ ಹೊಂದಿಸಿ ಸರಿಯಾದ ಉತ್ತರವನ್ನು ಅದರ ಕ್ರಮಾಕ್ಷರ ಸಹಿತ ಬರೆಯಿರಿ **5x1=5**

11.

ಪಟ್ಟಿ 'A'	ಪಟ್ಟಿ 'B'
A) ಮೂಲಭೂತ ಕರ್ತವ್ಯಗಳು	i) ಬ್ರಿಟೀಷ್ ಸಂವಿಧಾನ
B) ಸಮವರ್ತಿ ಪಟ್ಟಿ	ii) ಕೆನಾಡದ ಸಂವಿಧಾನ
C) ಮೂಲಭೂತ ಹಕ್ಕುಗಳು	iii) ರಷ್ಯಾದ ಸಂವಿಧಾನ
D) ಬಲಿಷ್ಟ ಕೇಂದ್ರ	iv) ಆಷ್ಟ್ರೇಲಿಯಾ ಸಂವಿಧಾನ
E) ಸಂಸದೀಯ ಪ್ರಜಾಪ್ರಭುತ್ವ	v) ಅಮೇರಿಕಾದ ಸಂವಿಧಾನ
	vi) ಐರಿಷ್ ಸಂವಿಧಾನ
	vii) ದಕ್ಷಿಣ ಆಫ್ರಿಕಾ ಸಂವಿಧಾನ

ಉತ್ತರ :

ಪಟ್ಟಿ 'A'	ಪಟ್ಟಿ 'B'
A) ಮೂಲಭೂತ ಕರ್ತವ್ಯಗಳು	iii) ರಷ್ಯಾದ ಸಂವಿಧಾನ
B) ಸಮವರ್ತಿ ಪಟ್ಟಿ	iv) ಆಷ್ಟ್ರೇಲಿಯಾ ಸಂವಿಧಾನ
C) ಮೂಲಭೂತ ಹಕ್ಕುಗಳು	v) ಅಮೇರಿಕಾದ ಸಂವಿಧಾನ
D) ಬಲಿಷ್ಟ ಕೇಂದ್ರ	ii) ಕೆನಾಡದ ಸಂವಿಧಾನ
E) ಸಂಸದೀಯ ಪ್ರಜಾಪ್ರಭುತ್ವ	i) ಬ್ರಿಟೀಷ್ ಸಂವಿಧಾನ
	vi) ಐರಿಷ್ ಸಂವಿಧಾನ
	vii) ದಕ್ಷಿಣ ಆಫ್ರಿಕಾ ಸಂವಿಧಾನ

III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಿಂದ ಉತ್ತರಿಸಿ. **15x1=15**

12. ಡಾ ಬಿ.ಆರ್. ಅಂಬೇಡ್ಕರ್‌ರವರನ್ನು ಸಂವಿಧಾನ ಶಿಲ್ಪಿ ಎಂದು ಪರಿಗಣಿಸಲಾಗಿದೆ. ಏಕೆ?
ಉತ್ತರ : ಸಂವಿಧಾನ ರಚನೆಗೆ ಅವರು ನೀಡಿರುವ ಕೊಡುಗೆಗಾಗಿ.

13. ಭಾರತವು ಒಂದು ಸಾರ್ವಭೌಮ ರಾಷ್ಟ್ರವಾಗಿದೆ. ಹೇಗೆ?
ಉತ್ತರ : ಆಂತರೀಕ ಹಾಗೂ ವಿದೇಶಾಂಗ ನೀತಿಯನ್ನು ರಚಿಸುವಾಗ ಯಾವುದೇ ರಾಷ್ಟ್ರದ ಒತ್ತಡಕ್ಕೆ ಮಣಿಯದಿರುವುದರಿಂದ

14. ಯಾವ ಮೂಲಭೂತ ಹಕ್ಕನ್ನು ಸಂವಿಧಾನದ ಆತ್ಮ ಮತ್ತು ಹೃದಯ ಎಂದು ಕರೆಯಲಾಗಿದೆ?
ಉತ್ತರ : ಸಂವಿಧಾನಾತ್ಮಕ ಪರಿಹಾರದ ಹಕ್ಕು

15. ಸರ್ಷಿಯೋರರಿ ಎಂದರೇನು?
ಉತ್ತರ : ಇದೊಂದು ರಿಟ್ ಅರ್ಜಿಯಾಗಿದ್ದು, ಕೆಳ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಮೀರಿ ತೀರ್ಪು ನೀಡಿದಾಗ ಉನ್ನತ ನ್ಯಾಯಾಲಯವು ಸಂಬಂಧಿಸಿದ ದಾಖಲೆಗಳನ್ನು ತನಗೆ ವರ್ಗಾಯಿಸುವಂತೆ ನೀಡುವ ಆಜ್ಞೆ

16. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಉಲ್ಲೇಖಿಸಲಾಗಿರುವ ಸಂವಿಧಾನದ ಭಾಗವನ್ನು ಹೆಸರಿಸಿ.
ಉತ್ತರ : ನಾಲ್ಕನೇ ಭಾಗ

17. ಭಾರತದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸುವ ಅಧಿಕಾರವನ್ನು ಯಾರು ಹೊಂದಿದ್ದಾರೆ?
ಉತ್ತರ : ರಾಷ್ಟ್ರಪತಿಗಳು

18. 'ಸದನದ ಬಾವಿ' ಯ ಅರ್ಥವನ್ನು ತಿಳಿಸಿ?
ಉತ್ತರ : ಗಂಬೀರ ವಿಷಯಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷದ ಸದಸ್ಯರು ಸ್ಪೀಕರ್ ಮುಂದಿನ ಸ್ಥಳಕ್ಕೆ ಧಾವಿಸಿ ಧರಣಿ ಕೈಗೊಳ್ಳುವ ಸ್ಥಳ

19. 'ಕೋರಂ' ಪದವನ್ನು ವ್ಯಾಖ್ಯಾನಿಸಿ.
ಉತ್ತರ : ಶಾಸಕಾಂಗದ ಅಧಿವೇಶನ ನಡೆಸಲು ಅಗತ್ಯವಿರುವ ಸದಸ್ಯರ ಸಂಖ್ಯೆಯೇ ಕೋರಂ

20. ಜಪಾನ್ ದೇಶದ ಶಾಸಕಾಂಗ ಯಾವುದು?
ಉತ್ತರ : ಡಯಟ್

21. ಸರ್ವೋಚ್ಚ ನ್ಯಾಯಾಲಯವನ್ನು ಮೂಲಭೂತ ಹಕ್ಕುಗಳ ರಕ್ಷಕ ಎಂದು ಕರೆಯಲಾಗಿದೆ. ಏಕೆ?
ಉತ್ತರ : ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ನೇರವಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಲು ಅವಕಾಶ ನೀಡಿರುವುದರಿಂದ

22. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವೆಂದು ಪರಿಗಣಿಸಲಾಗಿದೆ. ಕಾರಣ ಕೊಡಿ.
ಉತ್ತರ : ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸುವುದರಿಂದ ಇದನ್ನು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವೆಂದು ಪರಿಗಣಿಸಲಾಗಿದೆ

23. ರಾಜ್ಯ ಸರ್ಕಾರದ ಸಂವಿಧಾತ್ಮಕ ಮುಖ್ಯಸ್ಥರು ಯಾರು?
ಉತ್ತರ : ರಾಜ್ಯಪಾಲರು

24. ಲೊಕ ಅದಾಲತ್ ಎಂದರೇನು?
ಉತ್ತರ : ರಾಜಿ ಸಂಧಾನದ ಮೂಲಕ ಶೀಘ್ರವಾಗಿ ನ್ಯಾಯ ನೀಡುವ ನ್ಯಾಯಾಲಯ

25. ಕರ್ನಾಟಕ ಲೊಕಸೇವಾ ಅಯೋಗದ ಕೇಂದ್ರ ಕಛೇರಿಯು ಎಲ್ಲಿ ಸ್ಥಾಪಿತವಾಗಿದೆ?
ಉತ್ತರ : ಬೆಂಗಳೂರು

26. ಸಮಾಜವಾದಿ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ನಾವು ಏಕೆ ಅಳವಡಿಸಿಕೊಂಡಿದ್ದೇವೆ?
ಉತ್ತರ : ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನು ಒದಗಿಸಿಕೊಡಲು ಅಳವಡಿಸಿಕೊಂಡಿದ್ದೇವೆ.

III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **14x2=28**

27. ರಾಜ್ಯನೀತಿ ನಿರ್ದೇಶಕ ತತ್ವಗಳ ಲಕ್ಷಣಗಳನ್ನು ವಿವರಿಸಿ
ಉತ್ತರ :
- ಕಲ್ಯಾಣ ರಾಜ್ಯ ರಚನೆಗೆ ಅವಕಾಶ
- ಸ್ವಾತಂತ್ರ್ಯ, ಸಮಾನತೆ, ನ್ಯಾಯಾವನ್ನಾಧರಿಸಿದ ಸಮಾಜ ನಿರ್ಮಾಣ

- ನ್ಯಾಯಾರ್ಹವಾದವುಗಳಲ್ಲ

28. ರಾಜ್ಯನೀತಿ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಿಗಿಂತ ಭಿನ್ನವಾಗಿವೆ. ಸಮರ್ಥಿಸಿ.

ಉತ್ತರ :

ರಾಜ್ಯನೀತಿ ನಿರ್ದೇಶಕ ತತ್ವಗಳು	ಮೂಲಭೂತ ಹಕ್ಕುಗಳು
ಸಕಾರಾತ್ಮಕವಾದವುಗಳು	ನಕಾರಾತ್ಮಕವಾದವುಗಳು
ನ್ಯಾಯ ನಿರ್ದೇಶಿತವಾದವುಗಳಲ್ಲ	ನ್ಯಾಯಾರ್ಹವಾಗಿವೆ
ಸಕಾರಾತ್ಮಕವಾದವುಗಳು	ವ್ಯಕ್ತಿ ಕೇಂದ್ರಿತವಾಗಿವೆ
ಸರ್ಕಾರದ ನಿರ್ದೇಶಿತ ಗುರಿಗಳು	ನಿರ್ದೇಶಿತ ಗುರಿಗಳ ಸಾಧನಗಳಾಗಿವೆ

29. ಗಾಂಧೀವಾದಿ ತತ್ವಗಳನ್ನು ಪಟ್ಟಿಮಾಡಿ.

ಉತ್ತರ :

- ಪಂಚಾಯತ್ ರಾಜ್ ವ್ಯವಸ್ಥೆಯ ಸಂಘಟನೆ
- ಪಾನ ನಿಷೇಧ ಜಾರಿ
- ಸಹಕಾರಿ ತತ್ವದಡಿ ಗ್ರಾಮೀಣ ಕೈಗಾರಿಕೆಗಳ ಪ್ರೋತ್ಸಾಹ
- ಕೃಷಿ, ಪಶುಪಾಲನೆಯ ವೈಜ್ಞಾನಿಕ ಅಭಿವೃದ್ಧಿ
- ಹಿಂದುಳಿದ, ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆ
- ಗೋಹತ್ಯೆಯ ನಿಷೇಧ

30. ಭಾರತದ ರಾಷ್ಟ್ರಪತಿಯವರು ಉತ್ಸವ ಮೂರ್ತಿಯಂತೆ ಕಾಣುವರು. ವಿಶ್ಲೇಷಿಸಿ.

ಉತ್ತರ :

- ನಾಮಮಾತ್ರ ಕಾರ್ಯಾಂಗದ ಮುಖ್ಯಸ್ಥರು
- ಪ್ರಧಾನಮಂತ್ರಿ ಹಾಗೂ ಸಚಿವ ಸಂಪುಟದ ಸಲಹೆಯಂತೆ ಕಾರ್ಯ ನಿರ್ವಹಿಸುವರು
- ಸ್ವತಂತ್ರ ತೀರ್ಮಾನ ಕೈಗೊಳ್ಳಲು ಅಧಿಕಾರ ಇಲ್ಲದಿರುವುದು

31. ಮಂತ್ರಿಮಂಡಲದ ಸಚಿವರ ಖಾತೆಗಳ ವಿಧಗಳು ಯಾವುವು?

ಉತ್ತರ :

- ಸಂಪುಟ ದರ್ಜೆಯ ಸಚಿವರು
- ರಾಜ್ಯ ಸಚಿವರು
- ಉಪಮಂತ್ರಿಗಳು

32. ವಿಧಾನಸಭೆಯ ಸ್ಪೀಕರ್‌ರವರ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸಿ.

ಉತ್ತರ :

- ಸದನದ ಕಾರ್ಯಕಲಾಪಗಳ ನೇತೃತ್ವ
- ಸದನದ ಕಾರ್ಯಕಲಾಪಗಳ ಶಿಸ್ತು
- ಸದನದ ಘನತೆ ಗೌರವ ಕಾಪಾಡುವುದು
- ಸದನದ ಅಧಿವೇಶನ ಮುಂದೂಡುವುದು ರದ್ದುಪಡಿಸುವುದು
- ಮಸೂದೆಗಳ ವರ್ಗೀಕರಣ
- ನಿರ್ಣಾಯಕ ಮತ ಚಲಾವಣೆ

33. ವಿಧಾನ ಪರಿಷತ್ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?

ಉತ್ತರ :

- ಭಾರತದ ನಾಗರೀಕರಾಗಿರಬೇಕು
- ಕನಿಷ್ಟ ಮೂವತ್ತು ವರ್ಷ ವಯಸ್ಸಾಗಿರಬೇಕು
- ಸರ್ಕಾರದ ಲಾಭದಾಯಕ ಹುದ್ದೆ ಹೊಂದಿರಬಾರದು
- ಮಾನಸಿಕ ಅಸ್ವಸ್ಥರಾಗಿರಬಾರದು
- ಸಂಸತ್ತು ಕಾಲಕಾಲಕ್ಕೆ ನಿರ್ಧರಿಸುವ ಅರ್ಹತೆಗಳನ್ನು ಹೊಂದಿರಬೇಕು

34. ಉಚ್ಚ ನ್ಯಾಯಾಲಯವು ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದು. ಸಮರ್ಥಿಸಿ.

ಉತ್ತರ :

- ಬಂದೀ ಪ್ರತ್ಯಕ್ಷೀಕರಣ (ಹೆಬಿಯಸ್ ಕಾರ್ಪಸ್)
- ಪರಮಾದೇಶ (ಮ್ಯಾಂಡಮಸ್)
- ಉತ್ಪ್ರೇಕ್ಷಣ ಲೇಖ (ಸರ್ಷಿಯೋರರಿ)
- ಕೋ ವಾರೆಂಟೋ
- ಪ್ರತಿಬಂಧಕಾಜ್ಞೆ (ಪ್ರೊಹಿಬಿಷನ್)

35. ಶ್ರೇಣಿಕೃತ ಕಂದಾಯ ನ್ಯಾಯಾಲಯಗಳನ್ನು ಹೆಸರಿಸಿ.

ಉತ್ತರ :

- ತಹಶೀಲ್ದಾರ್ ನ್ಯಾಯಾಲಯ
- ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ
- ಜಿಲ್ಲಾ ದಂಡಾಧಿಕಾರಿಗಳ ನ್ಯಾಯಾಲಯ
- ಆಯುಕ್ತರ ನ್ಯಾಯಾಲಯ
- ಕಂದಾಯ ಮಂಡಳಿ

36. ಗ್ರಾಮ ಪಂಚಾಯಿತಿಗಳ ಕಾರ್ಯಗಳು ಯಾವುವು?

ಉತ್ತರ :

- ಗ್ರಾಮೀಣ ರಸ್ತೆ ನಿರ್ಮಾಣ
- ಶೌಚಾಲಯ ನಿರ್ಮಾಣ
- ಒಳ ಚರಂಡಿ
- ಕುಡಿಯುವ ನೀರು
- ಗ್ರಾಮೀಣ ವಸತಿ ಯೋಜನೆಗಳು
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು
- ದುರ್ಬಲ, ದಲಿತರ ಶೋಷಿತರ ಕಲ್ಯಾಣ, ಇತ್ಯಾದಿ

37. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ತಿಳಿಸಿ.

ಉತ್ತರ :

- ರಾಜ್ಯ ಸೇವೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು
- ನೇಮಕಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ
- ಬಡ್ತಿ, ವರ್ಗಾವಣೆಗೆ ಸಂಬಂಧಿಸಿದಂತೆ ಸಲಹೆ
- ಸೇವಾವಧಿ ವಿಸ್ತರಣೆ, ನಿವೃತ್ತರ ಮರು ನೇಮಕಾತಿಗೆ ಸಂಬಂಧಿಸಿದಂತೆ ಸಲಹೆ
- ರಾಜ್ಯಪಾಲರಿಗೆ ವಾರ್ಷಿಕ ವರದಿ ಸಲ್ಲಿಕೆ

38. ದಾಖಲೆಗಳ ನ್ಯಾಯಾಲಯವಾಗಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳನ್ನು ವಿವರಿಸಿ.

ಉತ್ತರ :

- ತನ್ನ ಅಧಿಕಾರ ವ್ಯಾಪ್ತಿ ನಿರ್ಣಯಿಸುವ ಅಧಿಕಾರ
- ತನ್ನ ನಿಂದನೆಗೆ ದಂಡಿಸುವ ಅಧಿಕಾರ
- ಉಚ್ಚ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳ ನಿಂಧನೆಗೆ ದಂಡಿಸುವ ಅಧಿಕಾರ

39. ಕೇಂದ್ರ ಶಾಸಕಾಂಗದ ಅವಿಶ್ವಾಸ ನಿರ್ಣಯವನ್ನು ವಿಶ್ಲೇಷಿಸಿ.

ಉತ್ತರ :

- ಮಂತ್ರಿ ಮಂಡಲವು ಸರಿಯಾಗಿ ಕಾರ್ಯ ನಿರ್ವಹಿಸದಿದ್ದಾಗ ಮಂಡಿಸುವ ನಿರ್ಣಯ
- ಅವಿಶ್ವಾಸ ನಿರ್ಣಯವು ಬಹುಮತದಿಂದ ಅಂಗೀಕಾರವಾದರೆ ಸರ್ಕಾರವು ರಾಜಿನಾಮೆ ನೀಡಬೇಕು
- ಸರ್ಕಾರವು ಸರಿಯಾಗಿ ಆಡಳಿತ ನಡೆಸಲು ಇದು ಅವಶ್ಯಕ

40. ಲೋಕಸಭೆಯ ರಚನೆಯನ್ನು ವಿವರಿಸಿ.

ಉತ್ತರ :

- ಸಂಸತ್ತಿನ ಕೆಳಮನೆ
- ಜನರಿಂದ ನೇರವಾಗಿ ಚುನಾವಣೆಯ ಮೂಲಕ ಸದಸ್ಯರ ಆಯ್ಕೆ
- ಒಟ್ಟು ಸದಸ್ಯರ ಸಂಖ್ಯೆ 543
- ಸರ್ಕಾರದ ವಿಶ್ವಾಸ ನಷ್ಟವಾದಾಗ ವಿಸರ್ಜನೆ ಮಾಡಬಹುದಾದ ಸದನ

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **6x3=18**

41. ಸಂವಿಧಾನ ಪ್ರಸ್ತಾವನೆಯಲ್ಲಿನ ಪ್ರಮುಖ ಅಂಶಗಳು ಯಾವುವು?

ಉತ್ತರ :

- ಭಾರತದ ಪ್ರಜೆಗಳು
- ಸಾರ್ವಭೌಮತ್ವ
- ಸಮಾಜವಾದ
- ಜಾತ್ಯಾತೀತತೆ
- ಪ್ರಜಾಸತ್ತಾತ್ಮಕ
- ಗಣರಾಜ್ಯ
- ನ್ಯಾಯ
- ಸ್ವಾತಂತ್ರ್ಯ
- ಸಮಾನತೆ
- ಭ್ರಾತೃತ್ವ
- ಐಕ್ಯತೆ ಮತ್ತು ಭಾವೈಕ್ಯತೆ

42. ಸ್ವಾತಂತ್ರದ ಹಕ್ಕಿನಡಿಯಲ್ಲಿ ಪ್ರಜೆಗಳು ಅನುಭವಿಸುವ ವಿವಿಧ ಸ್ವಾತಂತ್ರವನ್ನು ವಿವರಿಸಿ.

ಉತ್ತರ :

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ
- ಸಭೆ ಸೇರುವ ಸ್ವಾತಂತ್ರ್ಯ
- ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ
- ಸಂಚರಿಸುವ ಸ್ವಾತಂತ್ರ್ಯ
- ವಾಸಿಸುವ ಸ್ವಾತಂತ್ರ್ಯ
- ಕಾನೂನೂ ಮಾನ್ಯ ಮಾಡಿರುವ ವ್ಯಾಪಾರ ಮತ್ತು ಉದ್ಯೋಗದ ಸ್ವಾತಂತ್ರ್ಯ

43. ರಾಜ್ಯಸಭೆಯನ್ನು ಹಿರಿಯರ ಸದನ ಎನ್ನುವರು. ವಿಶ್ಲೇಷಿಸಿ.

ಉತ್ತರ :

- ಸದಸ್ಯರಾಗಬಯಸಯವವರು ಕನಿಷ್ಟ ಮೂವತ್ತು ವರ್ಷ ವಯಸ್ಸಿನವರಾಗಿರಬೇಕು
- ಬಹುತೇಕ ಹಿರಿಯರನ್ನು ನಾಮ ನಿರ್ದೇಶನ ಮಾಡಲಾಗುವುದರಿಂದ
- ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯರು ಈ ಸದನಕ್ಕೆ ನೆಮಕವಾಗುವುದರಿಂದ

44. ಸರ್ವೋಚ್ಚ ನ್ಯಾಯಾಲಯದ ನ್ಯಾಯಿಕ ವಿಮರ್ಶೆ ಅಧಿಕಾರವನ್ನು ವಿವರಿಸಿ

ಉತ್ತರ :

- ಶಾಸಕಾಂಗವು ರಚಿಸಿದ ಕಾನೂನುಗಳ ಸಂವಿಧಾನದ ನಿಯಮಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎಂಬುದರ ಪರಾಮರ್ಶೆ
- ಸಂವಿಧಾನಕ್ಕೆ ವಿರುದ್ಧವಾಗಿರುವ ನಿಯಮಗಳನ್ನು 'ಅಸಿಂಧು' ಎಂದು ಘೋಷಣೆ
- ಸಂವಿಧಾನ ಬಾಹಿರ ಕಾನೂನುಗಳ ಪರಾಮರ್ಶೆ

45. ಮುಖ್ಯಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳು ಯಾವುವು?

ಉತ್ತರ :

- ಮಂತ್ರಿ ಮಂಡಲದ ಅಧ್ಯಕ್ಷತೆ
- ರಾಜ್ಯಪಾಲರು ಮತ್ತು ಮಂತ್ರಿ ಮಂಡಲದ ನಡುವೆ ಸಂಪರ್ಕ
- ಮಂತ್ರಿಗಳಿಗೆ ಖಾತೆ ಹಂಚಿಕೆ
- ವಿವಿಧ ಇಲಾಖೆಗಳ ನಡುವೆ ಸಮನ್ವಯ
- ವಿಧಾನಸಭೆಯ ನಾಯಕ
- ವಿಧಾನಸಭೆಯ ವಿಸರ್ಜನೆಗೆ ಶಿಫಾರಸ್ಸು
- ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ

46. ಕೇಂದ್ರ ಲೋಕಸೇವಾ ಅಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಯಾವ ಸಂದರ್ಭಗಳಲ್ಲಿ ಅಧಿಕಾರದಿಂದ ಪದಚ್ಯುತಿಗೊಳಿಸಲಾಗುತ್ತದೆ?

ಉತ್ತರ :

- ಸದಸ್ಯರ ದುರ್ನಡತೆಯ ಬಗ್ಗೆ ವಿಚಾರಣೆ ನಡೆದು ಅಪಾದನೆ ಸಾಬೀತಾಗಿರುವ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರಪತಿಗಳಿಗೆ ವರದಿ ಸಲ್ಲಿಸಿದರೆ
- ಆರ್ಥಿಕವಾಗಿ ದಿವಾಳಿಯೆಂದು ನ್ಯಾಯಾಲಯುವು ತೀರ್ಪು ನೀಡಿದಾಗ
- ತಮ್ಮ ಅಧಿಕಾರವಧಿಯಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿರುವುದು ಸಾಬೀತಾದರೆ
- ದೈಹಿಕವಾಗಿ ಬಲಹೀನರಾಗಿದ್ದು ಸೇವೆಯಲ್ಲಿ ಮುಂದುವರಿಯಲು ಅಸಮರ್ಥರೆಂದು ತೀರ್ಮಾನಿಸಲ್ಪಟ್ಟರೆ

ಈ ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **1x4=4**

47. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993 ರ ಪ್ರಮುಖ ಲಕ್ಷಣಗಳನ್ನು ವಿವರಿಸಿ.

ಉತ್ತರ :

- ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೇರ ಚುನಾವಣೆ
- ಐದರಿಂದ ಏಳು ಸಾವಿರ ಜನಸಂಖ್ಯೆಗೆ ಒಂದು ಗ್ರಾಮ ಪಂಚಾಯಿತಿಯ ರಚನೆ
- ಗ್ರಾಮ ಪಂಚಾಯಿಗಳಿಗೆ ಪಕ್ಷ ರಹಿತ ಚುನಾವಣೆ
- ವಿವಿಧ ಪ್ರವರ್ಗದವರಿಗೆ ಮೀಸಲಾತಿಯ ನಿಗಧಿ
- ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸ್ವಾಯುಕ್ತತೆ
- ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ
- ಜಿಲ್ಲಾ ಪಂಚಾಯಿತಿಯ ರಚನೆ
- ತಾಲ್ಲೂಕು ಪಂಚಾಯಿತಿಯ ರಚನೆ

.

.